JUNE 01, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಅಪೌಷ್ಟಿಕತೆ ಹಾಗೂ ಬಾಲ್ಯ ವಿವಾಹ** ತಡೆಗಟ್ಟಲು, ಜಿಲ್ಲಾಡಳಿತಗಳಿಗೆ ಮುಖ್ಯಮಂತ್ರಿ ನಿರ್ದೇಶನ.
- **ವಿಕಸಿತ ಕೃಷಿ ಸಂಕಲ್ಪ ಅಭಿಯಾನ;** ಹಲವು ಕ್ಷೇತ್ರಗಳ ತಜ್ಞರಿಂದ, ರೈತರೊಂದಿಗೆ, ಸಮಾಲೋಚನೆ.
- **ಇಂದು, ವಿಶ್ವ ಹಾಲು ದಿನಾಚರಣೆ;** ಹೈನೋದ್ಯಮದ ಶಕ್ತಿಯನ್ನು, ನಾವೆಲ್ಲ ಸಂಭ್ರಮಿಸೋಣ, ಧ್ಯೇಯ.
- **'ಅಮೃತ ಭಾರತ ರೈಲು ನಿಲ್ದಾಣ ಯೋಜನೆ';** ಬೀದರ್ ರೇಲ್ವೆ ನಿಲ್ದಾಣದ, ಪುನರಾಭಿವೃದ್ಧಿ.

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯಾದ್ಯಂತ, 700 ಬಾಲ್ಯ ವಿವಾಹಗಳು** ಜರುಗಿದ್ದು, ಬಾಲ್ಯ ವಿವಾಹ ತಡೆಗಟ್ಟಲು, ಜಿಲ್ಲಾ ಸಮಿತಿಗಳು ಸಕ್ರಿಯವಾಗಬೇಕು; ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಬೇಕು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದಾರೆ. ಬೆಂಗಳೂರಿನಲ್ಲಿ ಜರುಗಿದ, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯ್ತಿ ಸಿ.ಇ.ಓ.ಗಳು ಹಾಗೂ ಉಸ್ತುವಾರಿ ಕಾರ್ಯದರ್ಶಿಗಳ ಸಭೆಯಲ್ಲಿ ಅವರು ಮಾತನಾಡಿದರು. ವಿಜಯನಗರ ಜಿಲ್ಲೆಯಲ್ಲಿ, ಅಪೌಷ್ಟಿಕತೆ ಮಟ್ಟ, ಶೇಕಡ 5 ದಶಾಂಶ 5–3 ರಷ್ಟಿದೆ. ಬೀದರ್‌ನಲ್ಲಿ ಶೇಕಡ 5 ದಶಾಂಶ 6, ಬಳ್ಳಾರಿ ಜಿಲ್ಲೆಯಲ್ಲಿ ಶೇಕಡ 4 ದಶಾಂಶ 3–9 ರಷ್ಟಿದೆ. ಅಪೌಷ್ಟಿಕತೆಯ ಮಟ್ಟವನ್ನು, ಶೇಕಡ 1ಕ್ಕೆ ಇಳಿಸಲು ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳುವಂತೆ, ಮುಖ್ಯಮಂತ್ರಿ ಸೂಚಿಸಿದರು. ಮಕ್ಕಳಲ್ಲಿ ಅಪೌಷ್ಟಿಕತೆ ನೀಗಿಸಲು, ಶಾಲೆಗಳಲ್ಲಿ ಒದಗಿಸಲಾಗುವ ಹಾಲು, ಮೊಟ್ಟೆ ಸಮರ್ಪಕವಾಗಿ ನೀಡಲಾಗುತ್ತಿದೆಯೇ? ಎಂಬುದನ್ನು ಖಾತ್ರಿ ಪಡಿಸಿಕೊಂಡು, ವರದಿ ಸಲ್ಲಿಸುವಂತೆ ತಿಳಿಸಿದರು.

<><><>

**ರಾಜ್ಯದ ಹಲವು ಜಿಲ್ಲೆಗಳಲ್ಲಿ,** ಕಾಡಾನೆ ಹಾಗೂ ಅರಣ್ಯದಂಚಿನ ಜನವಸತಿ ಸಂಘರ್ಷದ ವೇಳೆ, ಪ್ರಾಣ ಹಾನಿ ತಡೆಗಟ್ಟಲು, ಜೇನು ಕೃಷಿ ಮೂಲಕ, ಜೇನು ದುಂಬಿ ತಡೆಗೋಡೆ, 'ಹನಿ ಬೀಸ್ ಫೆನ್ಸಿಂಗ್' ಆರಂಭಿಸಲು, ಯೋಜಿಸುವಂತೆ, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ, ಮನವಿ ಮಾಡಿದ್ದಾರೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಜರುಗಿದ ಸಭೆಯಲ್ಲಿ, ಮಾನವ ಹಾಗೂ ವನ್ಯಜೀವಿ ಸಂಘರ್ಷಕ್ಕೆ, ವೈಜ್ಞಾನಿಕ ಪರಿಹಾರ ಒದಗಿಸುವ ಬಗ್ಗೆ ಗಂಭೀರ ಚರ್ಚೆ ನಡೆಯಿತು. ಆನೆಗಳು ಜೇನು ದುಂಬಿಗಳಿರುವ ಪ್ರದೇಶಕ್ಕೆ ಬರುವುದಿಲ್ಲ. ಹೀಗಾಗಿ, ಆನೆ ಬ್ಯಾರಿಕೇಡ್ ಹಾಕಿರುವ ಮಾರ್ಗದುದ್ದಕ್ಕೂ, ಜೇನು ಕೃಷಿ ಕೈಗೊಂಡರೆ, ರೈತರಿಗೂ ಅನುಕೂಲ, ಆನೆಗಳ ಕಾಟವೂ ತಪ್ಪುತ್ತದೆ ಎಂದರು.

<><><>

**ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ**ದ ಹಿನ್ನೆಲೆ, ಬೆಳಗಾವಿ ಜಿಲ್ಲೆ, ಚನ್ನಮ್ಮನ ಕಿತ್ತೂರು ತಾಲೂಕಿನ, ತುರಮರಿ ಗ್ರಾಮದಲ್ಲಿ, ರೈತರೊಂದಿಗೆ ಕೃಷಿ ತಜ್ಞರು ಸಂವಾದ ನಡೆಸಿದರು. ಮುಂಗಾರಿ ಬೆಳೆಗಳನ್ನು, ವೈಜ್ಞಾನಿಕವಾಗಿ ಬೆಳೆಯುವ ಕ್ರಮದ ಬಗ್ಗೆ, ರೈತರೊಂದಿಗೆ ಚರ್ಚಿಸಿದರು.

<><><>

**ಬೆಳಗಾವಿ ಜಿಲ್ಲೆ, ಮತ್ತಿಕೊಪ್ಪದ, ಗಾಂಧಿ ಕೃಷಿ ವಿಜ್ಞಾನ** ಕೇಂದ್ರದ ಹಿರಿಯ ವಿಜ್ಞಾನಿ, ಜಿ.ಬಿ. ವಿಶ್ವನಾಥ, ವಿಕಸಿತ ಕೃಷಿ ಸಂಕಲ್ಪ ಅಭಿಯಾನದ ಕುರಿತು, ತುರಮರಿ ಗ್ರಾಮದ ರೈತರಿಗೆ ಮಾಹಿತಿ ನೀಡಿದರು.

<><><>

**ಜಿ.ಬಿ. ವಿಶ್ವನಾಥ ಧ್ವನಿ 50 ಸೆಕೆಂದುಗಳು**

<><><>

**ಹಾವೇರಿ ಜಿಲ್ಲೆ, ಶಿಗ್ಗಾವಿ ತಾಲೂಕು,** ನಾರಾಯಣಪುರದಲ್ಲಿ, ಧಾರವಾಡ ಕೃಷಿ ವಿಶ್ವವಿದ್ಯಾಲಯ, ವಿವಿಧ ಸಂಸ್ಥೆಗಳ ಸಹಯೋಗದಲ್ಲಿ, ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ ಆಯೋಜಿಸಿತ್ತು. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಮಹೇಶ್, ಹಾವೇರಿ ಜಿಲ್ಲೆಯ 90 ಗ್ರಾಮ ಪಂಚಾಯ್ತಿಗಳಲ್ಲಿ ಅಭಿಯಾನ ಜರುಗಲಿದೆ. ಕೃಷಿ ವಿಶ್ವವಿದ್ಯಾಲಯ ಹಾಗೂ ವಿವಿಧ ಇಲಾಖೆಗಳ ಪರಿಣತರು, ರೈತರೊಂದಿಗೆ ಸಮಾಲೋಚಿಸಿ, ಸಮಸ್ಯೆ ತಿಳಿಯಲಿದ್ದಾರೆ ಎಂದರು. ಹಾವೇರಿ ಕೃಷಿ ವಿಜ್ಞಾನ ಕೇಂದ್ರದ, ಕೀಟ ಶಾಸ್ತ್ರಜ್ಞ ಕೃ ಣ್ಣ ನಾಯಕ್, ಪಶು ವೈದ್ಯ ಪಿ.ಕೃ ಣ್ಣಮೂರ್ತಿ ಪಾಲ್ಗೊಂಡಿದ್ದರು.

<><><>

**ಚಿಕ್ಕಮಗಳೂರು ಜಿಲ್ಲೆ,** ಕಡೂರು ತಾಲೂಕಿನ, ಪಂಚನ ಹಳ್ಳಿ, ಅಣ್ಣಿಗೆರೆ, ಗರ್ಜೆ, ಯಗಟಿ, ಕುಂಕನಾಡು ಸೇರಿ, ಹಲವು ಗ್ರಾಮಗಳಲ್ಲಿ, ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ ಜರುಗಿತು, ಎಂದು, ಮೂಡಿಗೆರೆಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ, ಕೆ.ಎಂ ಕೃಷ್ಣಮೂರ್ತಿ ತಿಳಿಸಿದ್ದಾರೆ. ಜೂನ್ 12ರ ವರೆಗೆ, ಕೃಷಿ ವಿಜ್ಞಾನಿಗಳು ಹಾಗೂ ತೋಟಗಾರಿಕೆ, ಹೈನುಗಾರಿಕೆ ತಜ್ಞರು, ಜಿಲ್ಲೆಯ ವಿವಿಧ ಗ್ರಾಮಗಳಿಗೆ ತೆರಳಿ, ರೈತರೊಂದಿಗೆ ಸಮಾಲೋಚಿಸಲಿದ್ದಾರೆ, ಎಂದರು.

<><><>

**ರಾಯಚೂರು ತಾಲೂಕು, ಜಾಗೀರ್ ವೆಂಕಟಾಪುರ** ಗ್ರಾಮದಲ್ಲಿ, ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಜರುಗಿತು. ಭಾರತೀಯ ತೋಟಗಾರಿಕಾ ವಿಜ್ಞಾನ ಸಂಸ್ಥೆಯ ವಿಜ್ಞಾನಿ, ಹರೀಶ್, ರಾಯಚೂರು ಕೃಷಿ ವಿಜ್ಞಾನ ಕೇಂದ್ರದ, ಮಲ್ಲಾರೆಡ್ಡಿ ಹಾಗೂ ಕೀಟಶಾಸ್ತ್ರ ವಿಜ್ಞಾನಿ ಜಿ.ಎಸ್. ಶ್ರೀವಾಣಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಕೃಷಿ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ**

**ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.**

<><><>

**'ಹೈನೋದ್ಯಮದ ಶಕ್ತಿಯನ್ನು,** ನಾವೆಲ್ಲ ಸಂಭ್ರಮಿಸೋಣ' ಎಂಬ ಧ್ಯೇಯದೊಂದಿಗೆ, ಇಂದು, ಹಾಲು ಮತ್ತು ಡೇರಿ ಉತ್ಪನ್ನ ಹಾಗೂ ತನ್ಮೂಲಕ ಆರೋಗ್ಯ ಪೋಷಣೆ ಕುರಿತು, ಜನ ಜಾಗೃತಿ ಮೂಡಿಸುವ, ವಿಶ್ವ ಹಾಲು ದಿನ. ವಿಶ್ವ ಸಂಸ್ಥೆಯ, ಆಹಾರ ಮತ್ತು ಕೃಷಿ ಸಂಸ್ಥೆ 2001 ರಲ್ಲಿ ವಿಶ್ವ ಹಾಲು ದಿನವನ್ನು ಜೂನ್ 1 ರಂದು ಆಚರಿಸಲು, ಸೂಚಿಸಿದೆ. ಹಾಲಿನ ಪೌಷ್ಟಿಕಾಂಶ ಮೌಲ್ಯ, ಹೈನೋದ್ಯಮದ ಸುಸ್ಥಿರತೆ, ಹೈನುಗಾರರ ಆರ್ಥಿಕ ಸಂವರ್ಧನೆ ಹಾಗೂ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಹಾಲಿನ ಮೂಲಕ ಪೋಷಣೆಗೆ ಒತ್ತು ನೀಡಲು, ಜನ ಜಾಗ್ರತಿ ದಿನವಾಗಿ, ಆಚರಿಸಲಾಗುತ್ತದೆ.

<><><>

**ಧಾರವಾಡದ ವಿವೇಕ ಗ್ರಾಮೀಣ ಜೀವನಾಧಾರ** ಕೇಂದ್ರ, ಕರ್ನಾಟಕ ಹಾಲು ಒಕ್ಕೂಟ–ಕೆ.ಎಂ.ಎಫ್. ಸಹಯೋಗದಲ್ಲಿ, ಹೈನೋದ್ಯಮ ತರಬೇತಿಯನ್ನು ಕೃಷಿಕರಿಗಾಗಿ, ನಿಯಮಿತವಾಗಿ ಆಯೋಜಿಸುತ್ತದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದ ಸಂಚಾಲಕ, ಡಾಕ್ಟರ್ ಗೋಪಾಲಕೃಷ್ಣ ಕಮಲಾಪುರ.

<><><>

**ಗೋಪಾಲಕೃಷ್ಣ ಕಮಲಾಪುರ ಧ್ವನಿ 40 ಸೆಕೆಂದುಗಳು**

<><><>

**ಶಿವಮೊಗ್ಗ, ದಾವಣಗೆರೆ ಮತ್ತು** ಚಿತ್ರದುರ್ಗ ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿರುವ, ಶಿವಮೊಗ್ಗ ಸಹಕಾರ ಹಾಲು ಉತ್ಪಾದಕರ ಒಕ್ಕೂಟ – ಶಿಮುಲ್, ವಿಶ್ವ ಹಾಲು ದಿನದ ಹಿನ್ನೆಲೆ, ಇಂದು, 18 ವಿವಿಧ ಮಾದರಿ ನಂದಿನಿ ಕೇಕ್ ಹಾಗೂ ಮಫಿನ್‌ಗಳನ್ನು, ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ. ಉತ್ತಮ ಗುಣಮಟ್ಟ ಹಾಗೂ ಸ್ಪರ್ಧಾತ್ಮಕ ಬೆಲೆಗೆ ಆದ್ಯತೆ ನೀಡಿ, ಹಾಲಿನ ಉಪ ಉತ್ಪನ್ನಗಳನ್ನು ಶಿಮುಲ್ ತಯಾರಿಸಿದೆ ಎಂದು, ಶಿಮುಲ್ ವ್ಯವಸ್ಥಾಪಕ ನಿರ್ದೇಶಕ, ಎಸ್.ಜಿ. ಸೋಮಶೇಖರ್ ತಿಳಿಸಿದ್ದಾರೆ. ಒಕ್ಕೂಟ, ತನ್ನ ವ್ಯಾಪ್ತಿಯ 3 ಜಿಲ್ಲೆಗಳ, ಸಾವಿರದ 325 ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ, ನಿತ್ಯ 2 ಸರತಿಯಲ್ಲಿ, ಸರಾಸರಿ 8 ಲಕ್ಷ ಕಿಲೋ ಹಾಲನ್ನು ಸಂಗ್ರಹಿಸುತ್ತಿದೆ, ಎಂದರು.

<><><>

**ಕೇಂದ್ರ ಸರ್ಕಾರ, ಕೃಷಿ ಹಾಗೂ ಸಂಬಂಧಿತ** ಯೋಜನೆಗಳಿಗೆ ಆದ್ಯತೆ ನೀಡಿದೆ; ರೈತಸ್ನೇಹಿ ಯೋಜನೆಗಳಿಂದ, ಕೃಷಿ ಕ್ಷೇತ್ರದ ಸುಸ್ಥಿರ ಪ್ರಗತಿಗೆ, ಅಡಿಪಾಯ ಹಾಕಲಾಗಿದೆ ಎಂದು, ಕೇಂದ್ರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ರಾಜ್ಯ ಖಾತೆ ಸಚಿವರಾದ, ಶೋಭಾ ಕರಂದ್ಲಾಜೆ ತಿಳಿಸಿದ್ದಾರೆ. ಬೆಂಗಳೂರಿನ ಸಿಮ್ಯಾಪ್ ಸಂಶೋಧನಾ ಕೇಂದ್ರದಲ್ಲಿ, ಕೇಂದ್ರೀಯ ಔ ‘ಧೀಯ ಮತ್ತು ಸುಗಂಧ ಸಸ್ಯಗಳ ಸಂಸ್ಥೆ – ಸಿ.ಎಸ್.ಐ.ಆರ್. ಆಯೋಜಿಸಿದ್ದ, ಕೃಷಿ ಮೇಳಕ್ಕೆ ಚಾಲನೆ ನೀಡಿ, ಮಾತನಾಡಿದರು. ನೈಸರ್ಗಿಕ ಸುಗಂಧ ದ್ರವ್ಯಗಳ ಬಳಕೆಗೆ ವಿಶೇಷ ಇತಿಹಾಸವಿದೆ; ಯೋಗ, ಆಯುರ್ವೇದ, ಸಿರಿಧಾನ್ಯ ಸೇರಿದಂತೆ, ದೇಶಿಯ ಪದ್ಧತಿಗಳನ್ನು ಪ್ರಧಾನಮಂತ್ರಿ ವಿಶ್ವಕ್ಕೆ ಪರಿಚಯಿಸುತ್ತಿದ್ದಾರೆ ಎಂದರು. ಸಿಮ್ಯಾಪ್ ಸಂಶೋಧನಾ ಕೇಂದ್ರದ ವಿಜ್ಞಾನಿ ದಿನೇಶ್ ನಾಗೇಗೌಡ ಹಾಗೂ ಗಣ್ಯರು ಪಾಲ್ಗೊಂಡಿದ್ದರು.

<><><>

**'ಅಮೃತ ಭಾರತ ರೈಲು ನಿಲ್ದಾಣ ಪುನರಾಭಿವೃದ್ಧಿ** ಯೋಜನೆ' ಅಡಿ, 24 ಕೋಟಿ 35 ಲಕ್ಷ ರೂಪಾಯಿ ವೆಚ್ಚದಲ್ಲಿ ಕೈಗೊಳ್ಳಲಾದ, ಬೀದರ್ ರೇಲ್ವೆ ನಿಲ್ದಾಣದ ಅಭಿವೃದ್ಧಿ ಕಾಮಗಾರಿಗಳನ್ನು, ಕೇಂದ್ರ ರೇಲ್ವೆ ಖಾತೆ ರಾಜ್ಯ ಸಚಿವ, ವಿ.ಸೋಮಣ್ಣ ಪರಿಶೀಲಿಸಿದರು. ಸಿಕಂದರಾಬಾದ್ ವಿಭಾಗದ, ನಾಗಲಪಲ್ಲಿ ಹಾಗೂ ಬೀದರ್ ಮಧ್ಯೆ ರೇಲ್ವೆ ವಿಂಡೋ ಟ್ರೇಲಿಂಗ್ ನಡೆಸಿದರು. ಇದೇ ಸಂದರ್ಭದಲ್ಲಿ ಮಾಜಿ ಸಚಿವ ಬಂಡೆಪ್ಪ ಖಾಶೆಂಪೂರ, ಹೈದರಾಬಾದ್–ಬೀದರ್ ನಡುವೆ ವಂದೇ ಭಾರತ್ ರೈಲು ಆರಂಭಿಸುವಂತೆ, ಸಚಿವ ಸೋಮಣ್ಣ ಅವರಿಗೆ, ಮನವಿ ಸಲ್ಲಿಸಿದರು.

<><><>

**ಈಗ ಸಂಕ್ಷಿಪ್ತ ಸುದ್ದಿಗಳು**

<><><>

**ಮಧ್ಯ ಪ್ರದೇಶದ ಇಂದೋರ್‌ನಲ್ಲಿ,** ಪ್ರಧಾನಮಂತ್ರಿ ನರೇಂದ್ರ ಮೋದಿ, ಅಹಲ್ಯಾ ಬಾಯಿ ಹೋಳ್ಕರ್ ಅವರ, 300ನೇ ಜನ್ಮ ವ ರ್ಷಾಚರಣೆ ಸ್ಮರಣಾರ್ಥ, ಅಂಚೆ ಚೀಟಿ ಹಾಗೂ ನಾಣ್ಯವನ್ನು ಬಿಡುಗಡೆ ಮಾಡಿದರು.

<><><>

**ತಂಬಾಕು ಸೇವನೆ ಅಪಾಯಗಳ ಕುರಿತು,** ಜಾಗೃತಿ ಮೂಡಿಸುವ, ವಿಶ್ವ ತಂಬಾಕು ರಹಿತ ದಿನವನ್ನು, ರಾಜ್ಯಾದ್ಯಂತ ಆಚರಿಸಿದ, ವರದಿಗಳು ಬಂದಿವೆ. ವಿಶ್ವಾದ್ಯಂತ 1 ದಶಾಂಶ 3 ಶತಕೋಟಿ ಜನ, ತಂಬಾಕು ಸೇವಿಸುತ್ತಿದ್ದು, ತಡೆಗಟ್ಟಬಹುದಾದ ಸಾವಿಗೆ, ತಂಬಾಕು ಸೇವನೆ ಪ್ರಮುಖ ಕಾರಣ.

<><><>

**ಆಕಾಶವಾಣಿ ಹಾಗೂ ದೂರದರ್ಶನದ** ಚಿತ್ರದುರ್ಗ ಜಿಲ್ಲೆಯ, ಪ್ರತಿನಿಧಿಯಾಗಿದ್ದ, ಚನ್ನಬಸವಯ್ಯ ಅನಾರೋಗ್ಯದಿಂದ ನಿಧನರಾಗಿದ್ದಾರೆ. ಅವರಿಗೆ 46 ವರ್ಷ ವಯಸ್ಸಾಗಿತ್ತು.

<><><>

**ಕೊಪ್ಪಳ ವಿಶ್ವವಿದ್ಯಾಲಯ,** ಕೊಪ್ಪಳದ ಸಾಹಿತ್ಯ ಭವನದಲ್ಲಿ ಆಯೋಜಿಸಿದ್ದ, ಮಾಹಿತಿ ಹಕ್ಕು ಅಧಿನಿಯಮ–2005 ಕಾರ್ಯಾಗಾರದಲ್ಲಿ, ಮಾಹಿತಿ ಆಯೋಗದ ಆಯುಕ್ತ, ರುದ್ರಣ್ಣ ಹರ್ತಿಕೋಟೆ, ಪಾಲ್ಗೊಂಡಿದ್ದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಅಪೌಷ್ಟಿಕತೆ ಹಾಗೂ ಬಾಲ್ಯ ವಿವಾಹ** ತಡೆಗಟ್ಟಲು, ಜಿಲ್ಲಾಡಳಿತಗಳಿಗೆ ಮುಖ್ಯಮಂತ್ರಿ ನಿರ್ದೇಶನ.
- **ವಿಕಸಿತ ಕೃಷಿ ಸಂಕಲ್ಪ ಅಭಿಯಾನ;** ಹಲವು ಕ್ಷೇತ್ರಗಳ ತಜ್ಞರಿಂದ, ರೈತರೊಂದಿಗೆ, ಸಮಾಲೋಚನೆ.
- **ಇಂದು, ವಿಶ್ವ ಹಾಲು ದಿನಾಚರಣೆ;** ಹೈನೋದ್ಯಮದ ಶಕ್ತಿಯನ್ನು, ನಾವೆಲ್ಲ ಸಂಭ್ರಮಿಸೋಣ, ಧ್ಯೇಯ.
- **'ಅಮೃತ ಭಾರತ ರೈಲು ನಿಲ್ದಾಣ ಯೋಜನೆ';** ಬೀದರ್ ರೇಲ್ವೆ ನಿಲ್ದಾಣದ, ಪುನರಾಭಿವೃದ್ಧಿ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>